ವಿಜಯ ಕರ್ನಾಟಕ

ಬುಧವಾರ,19 ಜೂನ್ 2024

ಜಿಕೆವಿಕೆ ಆವರಣದಲ್ಲಿ 22ರಂದು ಉತ್ಪನ್ನಗಳ ಸಂತೆ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವು ತನ್ನ ಕಾರ್ಯ ಚಟುವಟಿಕೆಗಳು ಮತ್ತು ಉತ್ಪನ್ನಗಳ ಕುರಿತು ಸಾರ್ವಜನಿಕರಲ್ಲಿ ಮುಖ್ಯವಾಗಿ ರೈತರಲ್ಲಿ ಅರಿವು ಮೂಡಿಸಲು ಜೂ.22ರಂದು ಜಿಕೆವಿಕೆ ಆವರಣದಲ್ಲಿ 'ಉತ್ಪನ್ನಗಳ ಸಂತೆ' ಆಯೋಜಿಸಿದೆ. ಅಂದು ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30ರವರೆಗೆ ಉತ್ಪನ್ನಗಳ ಸಂತೆ ನಡೆಯಲಿದೆ. ಸಂತೆಯಲ್ಲಿ ಬೆಂಗಳೂರು ಕೃಷಿ ವಿವಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳು, ಉತ್ಪನ್ನಗಳು ಮತ್ತು ತಳಿಗಳ ಬಿತ್ತನೆ ಬೀಜ ಸೇರಿದಂತೆ ಹಲವು ಉತ್ಪನ್ನಗಳು ಪ್ರದರ್ಶನಗೊಳ್ಳಲಿವೆ. ಅಲ್ಲದೆ, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಕೀಟನಾಶಕಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣ, ಎರೆಗೊಬ್ಬರ, ರಾಸಾಯನಿಕಮುಕ್ತ ಬೆಲ್ಲ, ಜೇನು ತುಪ್ಪ, ರೇಷ್ಮೆ ಗೂಡಿನ ಕರಕುಶಲ ಉತ್ಪನ್ನಗಳು, ಬಾಳೆನಾರಿನ ಮತ್ತು ಬಾಳೆ ದಿಂಡಿನ ಮೌಲ್ಯವರ್ಧಿತ ಉತ್ಪನ್ನಗಳು, ರಾಜಮುಡಿ ಅಕ್ಕಿ, ಸಾವಯವ ರಾಗಿ, ಸಾವಯವ ಕೊಬ್ಬರಿ ಎಣ್ಣೆ, ಕೈಯಿಂದ ತಯಾರಿಸಿದ ಪರಿಮಳಯುಕ್ತ ಸಾಬೂನು ಮತ್ತು ಮುಖದ ಕ್ರೀಮುಗಳು, ತರಕಾರಿ ಬೀಜಗಳ ಪ್ಯಾಕೆಟ್, ಹಲಸಿನ ಹಣ್ಣು ಮತ್ತು ಹಣ್ಣಿನ ಉತ್ಪನ್ನಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಪೌಷ್ಟಿಕ ಲಡ್ಡು, ಬೇಕರಿ ಉತ್ಪನ್ನಗಳು, ತಿಂಡಿ-ತಿನಿಸುಗಳ ಮಿಶ್ರಣ, ಉಪ್ಪಿನಕಾಯಿ, ಚಟ್ನಿ ಪುಡಿ ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತದೆ. ಸಾರ್ವಜನಿಕರು ಮತ್ತು ರೈತರು ಈ ವಿನೂತನ ಸಂತೆಯ ಪ್ರಯೋಜನ ಪಡೆದುಬಹುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

ಕನ್ನಡಪ್ರಭ

ಬುಧವಾರ 19.06.2024

22ಕ್ಕೆ ಜಿಕೆವಿಕೆ ಆವರಣದಲ್ಲಿ ಕೃಷಿ ವಿವಿ ಉತ್ಪನ್ನಗಳ ಸಂತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ತನ್ನ ಕಾರ್ಯ ಚಟುವಟಿಕೆ ಮತ್ತು ಉತ್ಪನ್ನಗಳ ಕುರಿತು ಸಾರ್ವಜನಿಕರಲ್ಲಿ ಅದರಲ್ಲೂ ಮುಖ್ಯವಾಗಿ ರೈತರಲ್ಲಿ ಅರಿವು ಮೂಡಿಸಲು ಜೂ.22ರಂದು ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿ ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30 ರವರೆಗೂ ಪ್ರಥಮ ಬಾರಿಗೆ 'ಉತ್ಪನ್ನಗಳ ಸಂತೆ' ಆಯೋಜಿಸಿದೆ. ಸಂತೆಯಲ್ಲಿ ವಿವಿಯ ತಂತ್ರಜ್ಞಾನದ ಉತ್ಪನ್ನಗಳು. ವಿವಿಯ ಸಹಯೋಗದೊಂದಿಗೆ ಹೊರತಂದಿರುವ ಉತ್ಪನ್ನಗಳು, ಬಿತ್ತನೆ ಬೀಜ, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಕೀಟ ನಾಶಕ, ಗೊಬ್ಬರ, ಕೃಷಿ ಯಂತ್ರೋಪಕರಣ, ರಾಸಾಯನಿಕ ಮುಕ್ತ ಬೆಲ್ಲ, ಜೇನು ತುಪ್ಪ, ರೇಷ್ಮೆ ಗೂಡಿನ ಕರಕುಶಲ ಉತ್ಪನ್ನ, ಬಾಳೆನಾರು,ಬಾಳೆದಿಂಡಿನ ಮೌಲ್ಯವರ್ಧಿತ ಉತ್ಪನ್ನಗಳು ದೊರೆಯಲಿವೆ. ರಾಜಮುಡಿ ಅಕ್ಕಿ, ಸಾವಯುವ ರಾಗಿ, ಕೊಬ್ಬರಿ ಎಣ್ಣೆ, ಕೈಯಿಂದ ತಯಾರಿಸಿದ ಪರಿಮಳಯುಕ್ತ ಸಾಬೂನು, ಫೇಸ್‌ಕ್ರೀಮ್‌ತರಕಾರಿ ಬೀಜ, ಪ್ರದರ್ಶನ, ಮಾರಾಟಕ್ಕೆ ವ್ಯವಸ್ಥೆಯಿದೆ.

ಹೊಸ ದಿಗಂತ

ಬುಧವಾರ, 19 ಜೂನ್ 2024,

ಜೂ.22 ರಂದು ಉತ್ಪನ್ನಗಳ ಸಂತೆ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ಕಾರ್ಯ ಚಟುವಟಿಕೆಗಳು ಮತ್ತು ಉತ್ಪನ್ನಗಳ ಕುರಿತು ಸಾರ್ವಜನಿಕರಲ್ಲಿ ಹಾಗೂ ರೈತರಲ್ಲಿ ಅರಿವು ಮೂಡಿಸಲು ಉತ್ಪನ್ನಗಳ ಸಂತೆಯನ್ನು ಜೂ.22 ರಂದು ಜಿಕ ವಿಕೆ ಆವರಣದಲ್ಲಿ ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಹಮ್ಮಿಕೊಂಡಿದೆ.

ಸಂತೆಯಲ್ಲಿ ಕೃ.ವಿ.ವಿ, ಬೆಂಗಳೂರಿನ ತಂತ್ರಜ್ಞಾನದ ಉತ್ಪನ್ನಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಸಹಯೋಗದೊಂದಿಗೆ ಹೊರತಂದಿರುವ ಉತ್ಪನ್ನಗಳು / ತಳಿಗಳ ಬಿತ್ತನೆ ಬೀಜಗಳು, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಕೀಟನಾಶಕಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆ ಗೊಬ್ಬರ, ರಾಸಾಯನಿಕ ಮುಕ್ತ ಬೆಲ್ಲ, ಜೇನು ತುಪ್ಪ, ರೇಷ್ಮೆ ಗೂಡಿನ ಕರಕುಶಲ ಉತ್ಪನ್ನಗಳು, ಬಾಳೆನಾರಿನ ಮತ್ತು ಬಾಳೆ ದಿಂಡಿನ ಮೌಲ್ಯವರ್ಧಿತ ಉತ್ಪನ್ನಗಳು, ರಾಜಮುಡಿ ಅಕ್ಕಿ, ಸಾವಯುವ ರಾಗಿ, ಸಾವಯುವ ಕೊಬ್ಬರಿ ಎಣ್ಣೆ, ಕೈಯಿಂದ ತಯಾರಿಸಿದ ಪರಿಮಳಯುಕ್ತ ಸಾಬೂನು ಮತ್ತು ಮುಖದ ಕ್ರೀಮ್‌ಗಳು, ತರಕಾರಿ ಬೀಜಗಳ ಪ್ಯಾಕೆಟ್, ಹಲಸಿನ ಹಣ್ಣು ಮತ್ತು ಹಣ್ಣಿನ ಉತ್ಪನ್ನಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಪೌಷ್ಟಿಕ ಲಡ್ಡು, ಬೇಕರಿ ಉತ್ಪನ್ನಗಳು, ತಿಂಡಿ-ತಿನುಸುಗಳ ಮಿಶ್ರಣ, ಉಪ್ಪಿನಕಾಯಿ, ಚಟ್ನಿ ಪುಡಿ ಇನ್ನು ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತೆದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉದಯವಾಣಿ
ಬುಧವಾರ, ಜೂನ್ 19, 2024

ಜೂ.22ರಂದು ಬೆಂಗಳೂರು ಉತ್ಪನ್ನಗಳ ಸಂತೆ

ಉದಯವಾಣಿ ಸಮಾಚಾರ

ಬೆಂಗಳೂರು: ನಗರದ ಕೃಷಿ ವಿಶ್ವವಿದ್ಯಾಲಯ ಜೂ.22ರಂದು 'ಬೆಂಗಳೂರಿನ ಉತ್ಪನ್ನಗಳ ಸಂತೆ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಜಿಕೆವಿಕೆ ಆವರಣದಲ್ಲಿ ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30ರ ವರೆಗೆ ಉತ್ಪನ್ನಗಳ ಸಂತೆ ಹಮ್ಮಿಕೊಂಡಿದೆ. ಅದರ ಭಾಗವಾಗಿ ಬೆಂಗಳೂರಿನ ಉತ್ಪನ್ನಗಳು, ಜಿಕೆವಿಕೆ ಹೊರತಂದಿರುವ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ತಿಂಡಿ-ತಿನಿಸುಗಳ ಮಿಶ್ರಣ, ಉಪ್ಪಿನಕಾಯಿ, ಚಟ್ನಿ ಪುಡಿ ಇನ್ನು ಮುಂತಾದವುಗಳ ಪ್ರದರ್ಶನ ಮತ್ತು ಮಾರಾಟದ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರಿಗೆ ಹಾಗೂ ರೈತರಿಗೆ ಭಾಗವಹಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

Prajavani Pg.10

ಟೊಮೆಟೊ ಧಾರಣೆ ಏರುಮುಖ

ಪ್ರಜಾವಾಣಿ ವಾರ್ತೆ

ಕೋಲಾರ: ಈ ಬಾರಿ ಜಿಲ್ಲೆಯಲ್ಲಿ ಫಸಲು ಕಡಿಮೆಯಾದ ಕಾರಣ ದಿನದಿಂದ ದಿನಕ್ಕೆ ನಿಧಾನವಾಗಿ ಟೊಮೆಟೊಗೆ ಬೇಡಿಕೆ ಹೆಚ್ಚುತ್ತಿದ್ದು, ಧಾರಣೆ ಏರುಮುಖವಾಗಿದೆ.

ಸ್ಥಳೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಟೊಮೆಟೊ ಕೆ.ಜಿಗೆ ₹60ರಿಂದ ₹80 ದರದಲ್ಲಿ ಮಾರಾಟವಾಗುತ್ತಿದೆ.

ಕೋಲಾರ ಎಪಿಎಂಸಿ ಮಾರುಕಟ್ಟೆ ಹರಾಜಿನಲ್ಲಿ ಉತ್ತಮ ಗುಣಮಟ್ಟದ 15 ಕೆ.ಜಿ. ತೂಕದ ಟೊಮೆಟೊ ಬಾಕ್ಸ್ ₹1,100ಕ್ಕೆ ಮಾರಾಟವಾಗಿದೆ. ಎಪಿಎಂಸಿ ಮಾರುಕಟ್ಟೆಯಲ್ಲಿ ಮಂಗಳವಾರ ಟೊಮೆಟೊ ಆವಕ ಪ್ರಮಾಣ 9,129 ಕ್ವಿಂಟಲ್ (71 ಸಾವಿರ ಬಾಕ್ಸ್) ಇತ್ತು.

ಉತ್ಪಾದನೆ ಹೆಚ್ಚಳಕ್ಕೆ ಕ್ರಿಯಾ ಯೋಜನೆ ರೂಪಿಸಿದ ಕೃಷಿ ಇಲಾಖೆ

ಕ್ಷೀಣಿಸುತ್ತಿರುವ ದ್ವಿದಳ ಧಾನ್ಯ ಪ್ರದೇಶ

ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ಒಂದೆಡೆ ಕೇಂದ್ರ ಸರಕಾರ ರೈತರ ಆದಾಯ ದ್ವಿಗುಣಕ್ಕೆ ಒತ್ತು ನೀಡುತ್ತಿದ್ದರೆ, ಮತ್ತೊಂದೆಡೆ ರಾಜ್ಯದ ದ್ವಿದಳ ಧಾನ್ಯ ಕೃಷಿ ಕ್ಷೇತ್ರ ಬೆಳವಣಿಗೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಇಳಿಮುಖದತ್ತ ಸಾಗಿದೆ. ಈ ಬಗ್ಗೆ ಕಳವಳ ಗೊಂಡಿರುವ ಇಲಾಖೆಯು, ಮುಂಗಾರು ಹಂಗಾಮಿನಿಂದಲೇ ಪ್ರದೇಶ ವಿಸ್ತರಣೆ ಮತ್ತು ಉತ್ಪಾದನೆ ಹೆಚ್ಚಿಸುವ ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿದೆ.

ಹವಾಮಾನ ವೈಪರೀತ್ಯ, ನೆಟೆ ರೋಗ, ಮಳೆ ಕೊರತೆ, ಬೆಳೆ ಆರೈಕೆಯಲ್ಲಿ ವಿಫಲ ಸೇರಿದಂತೆ ನಾನಾ ಕಾರಣಗಳಿಂದ ಕಳೆದ ಎರಡು ದಶಕಗಳಲ್ಲಿ ದ್ವಿದಳ ಧಾನ್ಯ ಬೆಳೆಯುವ ಪ್ರದೇಶ ಮತ್ತು ಉತ್ಪಾದಕತೆಯು ಏಕದಳ ಧಾನ್ಯಗಳಷ್ಟು ಏರಿಕೆ ಕಾಣುತ್ತಿಲ್ಲ,

ರಾಜ್ಯದಲ್ಲಿ 36 ಲಕ್ಷ ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲು ಅವಕಾಶವಿದ್ದರೂ, ಸದ್ಯ 26 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರವೇ ಬೆಳೆಯಲಾಗುತ್ತಿದೆ. ಅದರಲ್ಲೂ ಉದ್ದು ಎರಡು ದಶಕದ ಹಿಂದೆ 1.65 ಲಕ್ಷ ಹೆಕ್ಟೇರ್ ಇದ್ದುದು ಈಗ 0.5 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಒಟ್ಟಾರೆ ಅಲಸಂದೆ, ಉದ್ದು, ಹೆಸರು, ತೊಗರಿ, ಹುರುಳಿ ಸೇರಿದಂತೆ ನಾನಾ ದ್ವಿದಳ ಧಾನ್ಯಗಳನ್ನು ಮುಂಗಾರು ಹಂಗಾಮಿನಲ್ಲಿ 49,500 ಹೆಕ್ಟೇರ್‌ನಲ್ಲಿ ಅಂತರ ಬೆಳೆಯಲ್ಲಿ ಬೆಳೆಯಲು ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯಡಿ ಕೃಷಿ ಇಲಾಖೆಯು ಪ್ರಾತ್ಯಕ್ಷಿಕೆಗಳ ಮೂಲಕ ನೂತನ ತಳಿಗಳು ಹಾಗೂ ತಾಂತ್ರಿಕತೆಗಳನ್ನು ರೈತರಿಗೆ ಪರಿಚಯಿಸಿ ವಿಸ್ತೀರ್ಣ ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ರೈತ ಸಂಪರ್ಕ ಕೇಂದ್ರಗಳ ಮೂಲಕ ರಿಯಾಯಿತಿ ದರದಲ್ಲಿ 10 ವರ್ಷಗಳ ಒಳಗಿನ ತಳಿಗಳನ್ನು ಬಿತ್ತನೆಗಾಗಿ ವಿತರಿಸುವುದು, ಅಲ್ಪಾವಧಿ ಸಂಶೋಧನಾ ತಳಿಯ ಬಿತ್ತನೆ ಬೀಜಗಳು, ಬೀಜ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮೂಲಕ ಬೆಳೆಯ ವಿಸ್ತೀರ್ಣ ಹೆಚ್ಚಿಸಿ, ಉತ್ಪಾದಕತೆಯನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಈ ಮೂಲಕ ಪ್ರಸಕ್ತ ಮುಂಗಾರಿನಲ್ಲಿ 49,500 ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳ ಬೆಳೆ ವಿಸ್ತರಿಸಲು ಗುರಿ ಹಾಕಿಕೊಳ್ಳಲಾಗಿದೆ ಎಂದು ಕೃಷಿ ಇಲಾಖೆ ಆಯುಕ್ತ ವೈ.ಎಸ್. ಪಾಟೀಲ್ ತಿಳಿಸಿದರು.

ಹೈದರಾಬಾದ್‌ನ ಐಸಿಆರ್‌ಐಎಸ್‌ಎಟಿ ಸಂಸ್ಥೆಯೊಂದಿಗೆ ನೂತನ ಅಲ್ಪಾವಧಿ ತಳಿಗಳನ್ನು ಪರಿಚಯಿಸಿ ಉತ್ಪಾದನೆ ಮಾಡಲು ಒಡಂಬಡಿಕೆ ಮಾಡಿಕೊಂಡಿದೆ. ಮಹಾರಾಷ್ಟ್ರ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಮೊದಲ ಸ್ಥಾನದ ಲ್ಲಿದ್ದು, ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ರಾಜ್ಯವನ್ನು ಮುಂಚೂಣಿ ಸ್ಥಾನಕ್ಕೆ ತರಲು ಪ್ರಯತ್ನ ನಡೆದಿದೆ.
-ಎನ್. ಚಲುವರಾಯಸ್ವಾಮಿ ಕೃಷಿ ಸಚಿವರು

ಅಸಾಂಪ್ರದಾಯಿಕ ಪ್ರದೇಶದಲ್ಲಿ ಬೆಳೆ: ಮುಂಗಾರು ಅವಧಿಯಲ್ಲಿ ಸಾಂಪ್ರದಾಯಿಕ ಪ್ರದೇಶದಲ್ಲಿ ದ್ವಿದಳ ಧಾನ್ಯಗಳ ಇಳುವರಿ ಹೆಚ್ಚಿಸುವುದರ ಜತೆಗೆ ಸಾಂಪ್ರದಾಯಿಕವಲ್ಲದ ಪ್ರದೇಶದಲ್ಲಿ ಅಂದರೆ ಅಡಕೆ, ತೆಂಗು (ಅಡಕೆ ಬೆಳೆಯು 2.50 ಲಕ್ಷ ಹೆಕ್ಟೇರ್ ಇದ್ದುದು ಕಳೆದ 3-4 ವರ್ಷಗಳಲ್ಲಿ 7.50 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ) ಬೆಳೆಗಳ ಸಾಲಿನ ಮಧ್ಯೆ ಅಂತರ ಹೆಚ್ಚಾಗಿರುತ್ತದೆ. ಈ ಅಂತರದ ಜಾಗದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲು ಉತ್ತೇಜಿಸಲಾಗುತ್ತಿದೆ ಎಂದು ಕೃಷಿ ಇಲಾಖೆ ನಿರ್ದೇಶಕ ಡಾ. ಜಿ.ಟಿ. ಪುತ್ರ ತಿಳಿಸಿದರು.

ಎರಡೂವರೆ ದಶಕದಲ್ಲಾದ ಬದಲಾವಣೆ: 2000-01ರಲ್ಲಿ ರಾಜ್ಯದಲ್ಲಿ ಉದ್ದು 1.65 ಲಕ್ಷ ಹೆಕ್ಟೇರ್ ಪ್ರದೇಶದಿಂದ 0.5 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದ್ದು, ಉದ್ದು ಬದಲಿಗೆ ಸೋಯಾಬೀನ್ ಮತ್ತು ಮೆಕ್ಕೆಜೋಳಕ್ಕೆ ಪರಿವರ್ತನೆಯಾಗಿದ್ದಾರೆ. ಈ ಪ್ರದೇಶದಲ್ಲಿ ಮತ್ತೆ ಉದ್ದು ಬೆಳೆಯಲು ರೈತರಿಗೆ ಅಗತ್ಯ ಉತ್ತೇಜನ ನೀಡಲಾಗುವುದು. ತೊಗರಿ ಬೆಳೆಯು ಎರಡು ದಶಕದ ಹಿಂದೆ 4.82 ಲಕ್ಷ ಹೆಕ್ಟೇರ್ ಇದ್ದುದು ಇದೀಗ 14 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ. ಒಟ್ಟಾರೆ ದ್ವಿದಳ ಧಾನ್ಯಗಳ ವಿಸ್ತೀರ್ಣ 10 ಲಕ್ಷ ಹೆಕ್ಟೇರ್‌ನಿಂದ 26.10 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ.

ಉತ್ಪಾದಕತೆ ಹೆಚ್ಚಿಸುವ ನೂತನ ತಳಿಗಳು: ತೊಗರಿ ತಳಿಗಳು (ಜಿಆರ್‌ಜಿ-811, ಮತ್ತು 152, ಬಿಆರ್‌ಜಿ-5, ಬಿಆರ್‌ಜಿ-4), ಉದ್ದು ತಳಿಗಳು (ಎಲ್‌ಬಿಜಿ-791, ಡಿಬಿಜಿವಿ-5), ಹೆಸರು ತಳಿಗಳು (ಬಿಜಿಎಸ್-9, ಡಿಜಿಜಿವಿ-1) ಹಾಗೂ ಅಲಸಂದೆ ತಳಿಗಳು (ಡಿಸಿ-15, ಯುಎಚ್‌ಎಸ್-28).

ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.
ಪ್ರಕಟಣೆ ಸಂಖ್ಯೆ:ಸನಿಮೀ/ಮಾ/ಆಡಳಿತ/ಅಟೆ/24-25
ದಿನಾಂಕ:13.06.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೋಲಾರ ಜಿಲ್ಲೆ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಮಾಲೂರು ಇಲ್ಲಿಗೆ ತಿಂಗಳ ಬಾಡಿಗೆ ಆಧಾರದ ಮೇರೆಗೆ ಒಂದು ವರ್ಷದ ಅವಧಿಗೆ ವಾಹನವನ್ನು ಒದಗಿಸಲು ಅರ್ಹ ಟ್ಯಾಕ್ಸಿ ಮಾಲೀಕರು/ಸಂಸ್ಥೆಗಳಿಂದ ಸೀಲು ಮಾಡಿದ ಲಕೋಟೆಗಳಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನು, ದಿನಾಂಕ: 13.06.2024

VijayaKarnataka Pg.12

ಟೊಮ್ಯಾಟೊಗೆ ಶುಕ್ರದೆಸೆ ಶುರು

» 15 ಕೆಜಿ ಬಾಕ್ಸ್ ಸಾವಿರ ರೂ.ವರೆಗೂ ಮಾರಾಟ

ಮುಳಬಾಗಿಲು: ಟೊಮ್ಯಾಟೊಗೆ ಶುಕ್ರದೆಸೆ ಶುರುವಾಗಿದ್ದು, ತಾಲೂಕಿನ ಎಪಿಎಂಸಿ ಮಾರುಕಟ್ಟೆಯಲ್ಲಿ 15 ಕೆಜಿ ಬಾಕ್ಸ್ 400 ರಿಂದ 1000ವರೆಗೂ ಮಾರಾಟವಾಗಿದೆ. ಆ ಮೂಲಕ ಕಳೆದ ವರ್ಷದಂತೆ ಈ ಬಾರಿಯೂ ಟೊಮ್ಯಾಟೊಗೆ ಉತ್ತಮ ಬೆಲೆ ಸಿಗುವ ಸಾಧ್ಯತೆ ಗೋಚರಿಸುತ್ತಿದೆ. ತಾಲೂಕಿನಲ್ಲಿ ಟೊಮ್ಯಾಟೊ ಫಸಲು ಶೇ.30 ಮಾತ್ರ ರೈತರ ಕೈಗೆ ಸಿಗುತ್ತಿದ್ದು, ಬೆಲೆ ಹೆಚ್ಚಳಕ್ಕೆ ಇದೇ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಮತ್ತೊಂದೆಡೆ ತೋಟಗಳಲ್ಲಿ ಬೆಳೆ ರೋಗಕ್ಕೆ ತುತ್ತಾಗಿ ಫಸಲು ಕುಂಠಿತವಾಗಿದೆ. ಗುಣಮಟ್ಟದ ಕೊರತೆಯಿಂದ ದೂರದ ಊರುಗಳಿಗೆ ಪಾರ್ಸೆಲ್ ಹೋಗುವ ಟೊಮ್ಯಾಟೊ ಮಾತ್ರ 800 ರಿಂದ 1000 ರೂ.ಗೆ ಮಾರಾಟವಾಗುತ್ತಿದ್ದು, ಉಳಿದಂತೆ 400ರಿಂದ 800 ರೂ.ಗೆ ಹತ್ತಿರದ ಮಾರುಕಟ್ಟೆಗಳಿಗೆ ಪೂರೈಕೆಯಾಗುತ್ತಿದೆ.

Vijayavani
Pg.03

ಟೊಮೇಟೊ ಸೆಂಚುರಿ, ಬೀನ್ಸ್ ಡಬಲ್ ಸೆಂಚುರಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆಯಾದ ಬೆನ್ನಲ್ಲೇ ತರಕಾರಿ, ಸೊಪ್ಪು, ಹಣ್ಣುಗಳ ದರ ಮತ್ತಷ್ಟು ಏರಿಕೆಯಾಗಿದ್ದು, ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಮೊಟ್ಟೆ, ಮಾಂಸಕ್ಕಿಂತ ತರಕಾರಿಗಳೇ ಹೊರೆಯಾಗಿವೆ.

ಬಹುಬೇಡಿಕೆಯ ಟೊಮೇಟೊ, ಹಸಿ ಮೆಣಸಿನಕಾಯಿ, ಬೀನ್ಸ್, ಕೊತ್ತಂಬರಿ ಸೊಪ್ಪುಗಳು ಗಗನ ಮುಟ್ಟಿವೆ. ಏಲಕ್ಕಿ ಬಾಳೆ, ಟೊಮೇಟೊ ಸೆಂಚುರಿಯತ್ತ, ಬೀನ್ಸ್ ಡಬಲ್ ಸೆಂಚುರಿ ದಾಟಿದರೆ ಇತರೆ ತರಕಾರಿಗಳ ದರವೂ ಭಾರೀ ಏರಿಕೆಯಾಗಿದೆ. ಪೂರ್ವ ಮುಂಗಾರು ಅಧಿಕ ಪ್ರಮಾಣದಲ್ಲಿ ಸುರಿದ ಪರಿಣಾಮ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ತರಕಾರಿಗಳ ಉತ್ಪಾದನೆ ಕುಂಠಿತಗೊಂಡಿದೆ. ಜತೆಗೆ, ಶಾಲಾ-ಕಾಲೇಜುಗಳ ಹಾಸ್ಟೆಲ್, ಶುಭ ಕಾರ್ಯಗಳು, ಹೋಟೆಲ್‌ಗಳು, ಆಸ್ಪತ್ರೆಗಳಿಗೆ ಹೆಚ್ಚಿನ ಬೇಡಿಕೆಯಿದೆ. ಆದರೆ ಬೇಡಿಕೆಗೆ ತಕ್ಕಂತೆ ಪೂರಕೆಯಾಗದ ಹಿನ್ನೆಲೆಯಲ್ಲಿ ಬೆಲೆಗಳು ಗಗನಕ್ಕೇರಿವೆ.

ಕಳೆದ ಒಂದು ಒಂದೂವರೆ ತಿಂಗಳಿಂದಲೂ ತರಕಾರಿಗಳ ದರ ಏರಿಕೆಯಾಗುತ್ತಲೇ ಇವೆ. ಇದರ ಮಧ್ಯೆ ಆಗಾಗ್ಗೆ ಮಳೆ ಬೀಳುತ್ತಿರುವುದರಿಂದ ಕೆಲವು ತರಕಾರಿ ಬೆಳೆಗಳಿಗೆ ತೊಂದರೆಯಾಗುತ್ತಿದ್ದು, ಇಳುವರಿ ಕುಸಿದಿದೆ. ಹೀಗಾಗಿ, ಬೆಲೆಗಳು ಏರಿಕೆಯಾಗಿವೆ. ಬಹುತೇಕ ತರಕಾರಿಗಳ ದರ 100 ರೂ. ಗಡಿ ದಾಟಿದ್ದರೆ, ಕೆಲವು 200 ರೂ.ರ ಗಡಿದಾಟಿವೆ. ಸೊಪ್ಪುಗಳ ದರವೂ ಗಗನಕ್ಕೇರಿದೆ.

ಸಾಮಾನ್ಯವಾಗಿ 50-80 ರೂ.ವರೆಗೆ ಇರುತ್ತಿದ್ದ ಬೀನ್ಸ್ ದರ ಕಳೆದ ತಿಂಗಳು ಚಿಲ್ಲರೆ ದರದಲ್ಲಿ ಕೆ.ಜಿ.ಗೆ 200 ರೂ. ದಾಟಿತ್ತು. ಇದೀಗ 250 ರೂ. ಇದೆ. ಹಾಪ್‌ಕಾಮ್ಸ್‌ನಲ್ಲಿ ಕೆ.ಜಿ.ಗೆ 220 ರೂ. ತಲುಪಿತ್ತು. ಬಳಿಬದನೆ 100 ರೂ., ಕ್ಯಾಪ್ಸಿಕಂ 114 ರೂ., ಬಜ್ಜಿ ಮೆಣಸಿನಕಾಯಿ 114 ರೂ., ಊಟಿ ಕ್ಯಾರಟ್ 92 ರೂ. ಹೀಗೆ ಬಹುತೇಕ ತರಕಾರಿಗಳ ದರ ಏರಿಕೆಯಾಗಿದೆ.

ಹಸಿ ಮೆಣಸಿನಕಾಯಿ, ಹೀರೇಕಾಯಿ 100 ರೂ. ದಾಟಿದ್ದು, ಬದನೆಕಾಯಿ ಕೂಡ ಸೆಂಚುರಿಯತ್ತ ಸಾಗುತ್ತಿದೆ. ಟೊಮೇಟೊ ಕೂಡ 99 ರೂ. ತಲುಪಿದೆ. ಇದೇ ರೀತಿ ಹಲವು ತರಕಾರಿಗಳು ಗಗನ ಮುಟ್ಟಿವೆ. ಬೆಳ್ಳುಳ್ಳಿ ದರ ಕೂಡ ಮತ್ತೆ ಏರಿಕೆಯಾಗಿದ್ದು, ಕೆ.ಜಿ.ಗೆ 350-400 ರೂ. ಹಾಗೂ ಈರುಳ್ಳಿ ದರ ಕೆ.ಜಿ.ಗೆ 40-50 ರೂ.ಗೆ ಏರಿಕೆಯಾಗಿದೆ.

ಹಾಪ್‌ಕಾಮ್ಸ್‌ನಲ್ಲಿ ತರಕಾರಿ ದರ (ಕೆ.ಜಿ.ಗಳಲ್ಲಿ)

	ರೂಗಳಲ್ಲಿ
ಬೀನ್ಸ್	229
ಬಿಳಿ ಬದನೆ	100
ಬಜ್ಜಿ ಮೆಣಸಿನಕಾಯಿ	114
ಕ್ಯಾಪ್ಸಿಕಾಂ	114
ಮೂಲಂಗಿ	70
ನುಗ್ಗೆಕಾಯಿ	184
ಹೀರೇಕಾಯಿ	100
ಕ್ಯಾರಟ್ ಊಟಿ	92
ನವಿಲುಕೋಸು	98
ಟೊಮೇಟೊ	99
ಶುಂಠಿ	198
ಬೆಳ್ಳುಳ್ಳಿ	338
ನಾಟಿ ಕೊತ್ತಂಬರಿ	250
ಏಲಕ್ಕಿ ಬಾಳೆ	86

100 ರೂ.ಗೆ ಏರಿದ ಟೊಮೇಟೊ: ಮೇ ತಿಂಗಳ ಆರಂಭದಿಂದಲೂ ರಾಜ್ಯಾದ್ಯಂತ ನಿರಂತರವಾಗಿ ಮಳೆ ಬೀಳುತ್ತಿರುವುದರಿಂದ ಟೊಮೇಟೊ ಬೆಳೆಗೆ ಬಿಂಗಿ ರೋಗ ಬಂದಿದೆ. ಹೀಗಾಗಿ, ಟೊಮೇಟೊ ಕೆ.ಜಿ. ಗೆ 20-25 ರೂ. ಇದ್ದದ್ದು ಇದೀಗ 100 ರೂ.ಗೆ ತಲುಪಿದೆ. ಬೆಲೆಗಳು ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ದಿಢೀರ್ ಏರಿದ ಬಾಳೆ: ಬೇಸಿಗೆಯಲ್ಲಿ ಬಾಳೆಹಣ್ಣುಗಳನ್ನು ಕೇಳುವವರೇ ಇರಲಿಲ್ಲ. ಕೆ.ಜಿ.ಗೆ 40-50 ರೂ. ಇದ್ದದ್ದು ಇದೀಗ ಏಕಾಏಕಿ ಏಲಕ್ಕಿ ಬಾಳೆ 100 ರೂ.ಗೆ ಏರಿಕೆಯಾಗಿದೆ. ಮಳೆಯಿಂದಾಗಿ ಹಲವು ಕಡೆ ಬಾಳೆ ಬೆಳೆ ಹಾಳಾಗಿದೆ. ಜತೆಗೆ ಮದುವೆ, ಗೃಹ ಪ್ರವೇಶದಂತಹ ಕಾರ್ಯಕ್ರಮಗಳು ಹೆಚ್ಚಾಗಿರುವುದರಿಂದ ಬಾಳೆಹಣ್ಣಿಗೆ ಹೆಚ್ಚಿನ ಬೇಡಿಕೆಯಿದೆ. ಹೀಗಾಗಿ, ಬೆಲೆ ಏರಿಕೆಯಾಗಿದೆ.

ತೈಲ ಬೆಲೆ ಏರಿಕೆ ಬೆನ್ನಲ್ಲೇ ಮತ್ತಷ್ಟು ತುಟ್ಟಿಯಾದ ತರಕಾರಿ

ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಆನೇಕಲ್, ತುಮಕೂರು, ನೆಲಮಂಗಲ ಮತ್ತಿತರ ಭಾಗಗಳಿಂದ ಬೆಂಗಳೂರಿಗೆ ತರಕಾರಿಗಳು ಆಗಮಿಸುತ್ತಿವೆ. ಆಷಾಢದಲ್ಲಿ ಬೆಲೆಗಳು ಸ್ವಲ್ಪ ಇಳಿಕೆಯಾಗಬಹುದು. ಅಲ್ಲಿಯವರೆಗೂ ಬೆಲೆ ಏರಿಕೆ ಮುಂದುವರಿಯುತ್ತದೆ.

-**ಪ್ರಸಾದ್** ಕೆ.ಆರ್. ಮಾರುಕಟ್ಟೆ ತರಕಾರಿ ವ್ಯಾಪಾರಿ

ನಾಟಿ ಕೊತ್ತಂಬರಿ ಸೊಪ್ಪು ಏರಿಕೆ: ಮಳೆಯಿಂದ ಸೊಪ್ಪಿನ ಬೆಳೆಗಳು ಹಾಳಾಗಿದ್ದು, ದರ ಏರಿಕೆಯಾಗಿದೆ. ನಾಟಿ ಕೊತ್ತಂಬರಿ ಸೊಪ್ಪು ಒಂದು ಕಂತೆಗೆ 80-100 ರೂ. ದರವಿದೆ. ಸಬ್ಬಕ್ಕಿ, ಮೆಂತ್ಯ ಸೊಪ್ಪಿನ ದರವೂ ಗಗನಕ್ಕೇರಿದ್ದು, ಒಂದು ಕಂತೆ 40-50 ರೂ.ನಂತೆ ಮಾರಾಟವಾಗುತ್ತಿದೆ. ಬೆಲೆ ಹೆಚ್ಚಿದ್ದರೂ ಒಳ್ಳೆ ಸೊಪ್ಪು ಸಿಗುತ್ತಿಲ್ಲ.

VijayaKarnataka
Pg.07

Tomato prices may continue to remain high

Drop in supply caused by decrease in cultivation area

SNEHA RAMESH
BENGALURU, DHNS

The prices of tomatoes, which nearly doubled over the last 15 days, is likely to remain high for at least another 20 days.

This is because of a drop in supply caused mainly by a decrease in the area earmarked for its cultivation.

The prices in the retail market now range between Rs 70 and Rs 80 per kg.

The Kolar Agriculture Produce Market Committee (APMC), Asia's second-largest tomato market, on Tuesday, received close to 9,129 quintals of tomatoes, which is nearly 2,000 quintals less as compared to last year.

"Last year, on June 18, we received close to 11,250 quintals. There is clearly a reduction in arrivals.

"However, over the last few days, there is a small increase in arrivals and we are expecting it to pick up in the next 15 to 20 days," Vijayalakshmi, secretary of the Kolar APMC, told *DH*.

Vijayalakshmi also attributed the reduction in arrivals to decrease in the cultivation area, owing to fear among farmers.

After the crop was destroyed following the white fly outbreak last year, many farmers had reduced the cultivation area, she said.

While the state is expected to receive good rains this monsoon, this may prove to be counter-productive for tomato growers as heavy rains now could hamper the crop.

"Heavy rains that can cause floods could be a problem since there is a possibility that the crop might get destroyed. Otherwise we are hoping that the situation will stabilise within the next 15 days," R Kumara Swamy, Deputy Director of the Department of Horticulture in Kolar, told *DH*.

Vendors at the Madiwala market. DH PHOTO/PRERNA CHULUKA

Prices of other veggies to come down within a month

The prices of other vegetables like beans and carrots have also remained high, owing to the heat wave that swept across the state in April.

While beans are being sold at over Rs 200 a kg, carrot prices have touched Rs 100 a kg. But sources said prices of all the vegetables may come down within a month.

Sridhar, a vendor at Kalasipalyam, said that it usually takes at least 75 days after rains for the supplies to improve. "The drought and high temperature during summer had a significant impact on the supplies. Now that the monsoons have picked up, we are hoping that the supplies will improve within a month," he said.

DeccanHerald
Pg.II

Alliance Urges HUL to Reconsider Reduction of Palm Oil in its Soaps

Asian body says move can hit millions of farmers globally

Jayashree.Bhosale
@timesgroup.com

Pune: The Asian Palm Oil Alliance (APOA) has urged Hindustan Unilever (HUL) to reconsider its decision to decrease the palm oil content in its soaps by 25%, citing rising palm oil prices and environmental concerns. The move could have serious implications for millions of oil palm farmers worldwide, particularly smallholders, said APOA.

ET had reported that HUL is reducing the use of palm and its derivatives in soap by 25% to offset volatility in commodity prices as well as for environmental reasons.

"This decision, attributed to increased palm oil prices and environmental considerations, has significant implications for both the industry and sustainable development efforts," said APOA. The edible oil industry is worried about the 'signal' given by HUL's decision to cut palm oil use.

ISTOCK

INDUSTRY WORRIED

Edible oil industry worried about the 'signal' given by HUL's decision to cut palm oil use

"While we acknowledge that palm oil prices are currently higher than before the pandemic, this increase is primarily due to rising input costs. Needless to say, palm oil prices are influenced by other edible oil prices like soya and sunflower oil. To single out palm oil for unwarranted criticism appears a bit unfair and uncalled for," said Atul Chaturvedi, chairman, APOA, representing India, Sri Lanka, Bangladesh, Nepal and Pakistan.

Economics Times
Pg.09